

بسم اللهِ الرّحمٰن الرّحيم

# ಸತ್ಯನಿಷ್ಠೆ: ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01–05–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಸತ್ಯವಂತ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರ ಜೀವನ ಚರಿತ್ರೆಯಿಂದ ಎಲ್ಲ ಅವಸ್ಥೆಯಲ್ಲೂ ಸತ್ಯವನ್ನು ಪಾಲಿಸುವ ಮತ್ತು ಈ ವಿಷಯದಲ್ಲಿ ವಿರೋಧಿಗಳಿಗೆ ಚಾಲೇಂಜ್ ಹಾಕುವ ಕೆಲವು ಘಟನೆಗಳನ್ನು ಇಂದು ನಾನು ವಿವರಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ಸತ್ಯದೊಂದಿಗಿನ ಅಸಾಮಾನ್ಯ ಬದ್ಧತೆ, ತನ್ನ ಮಾತನ್ನು ವ್ಯಕ್ತಪಡಿಸುವ ಧೈರ್ಯ ಮತ್ತು ವಿರೋಧಿಗಳಿಗೆ ಸ್ಪಷ್ಟವಾದ ರೀತಿಯಲ್ಲಿ ಸವಾಲು ಹಾಕುವ ಅತ್ಯಂತ ಚೇತನಯುತ ಉದಾಹರಣೆಯನ್ನು ಈ ಘಟನೆಯು ಪ್ರಸ್ತುತಪಡಿಸುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ)ರ ಮೇಲೆ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಕುಫ್ರ್ ಮತ್ತು ಸುಳ್ಳಿನ ಗಂಭೀರ ಆರೋಪಗಳನ್ನು ಹೊರಿಸಿದಾಗ, ಹಝ್ರತ್ ಮಸೀಹ್ ಮೌಊದ್(ಅ) ಅವುಗಳನ್ನು ಕೇವಲ ತಪ್ಪೆಂದು ಸಾಬೀತುಪಡಿಸಲಿಲ್ಲ. ಬದಲಾಗಿ ಸಂಪೂರ್ಣ ದೃಢವಿಶ್ವಾಸ ಮತ್ತು ಘನತೆಯಿಂದ ನಿರ್ಣಾಯಕ ಚಾಲೇಂಜನ್ನು ಮುಂದಿಟ್ಟರು. ನಾನು ಎಂದಿಗೂ ಸುಳ್ಳು ಹೇಳಿಲ್ಲ ಎಂಬುದಕ್ಕೆ ನನ್ನ ಇಡೀ ಜೀವನವೇ ಸಾಕ್ಷಿಯಾಗಿದೆ ಎಂದೂ ಸಾಮಾನ್ಯ ಸಂದರ್ಭಗಳಲ್ಲಾಗಲಿ ಅಥವಾ ಜೀವ, ಗೌರವ ಮತ್ತು ಸಂಪತ್ತನ್ನು ಉಳಿಸಲು ಸುಳ್ಳು ಹೇಳುವುದು ಸುಲಭದ ದಾರಿಯಾಗಿದ್ದ ಸೂಕ್ಷ್ಮ ಸಂದರ್ಭಗಳಲ್ಲಾಗಲಿ ನಾನು ಸುಳ್ಳು ಹೇಳಿಲ್ಲ ಎಂದೂ ಹಝ್ರತ್ ಮಸೀಹ್ ಮೌಊದ್(ಅ) ಸ್ಪಷ್ಟ ಮಾತುಗಳಲ್ಲಿ ಹೇಳಿದರು.

ನ್ಯಾಯಾಲಯಗಳಲ್ಲಿಯೂ ಮೊಕದ್ದಮೆಯಲ್ಲಿ ಜಯ ಸಾಧಿಸಲು ಸುಳ್ಳು ಅತ್ಯಗತ್ಯ ಎಂದು ವಕೀಲರು ಸ್ಪಷ್ಟವಾಗಿ ಹೇಳಿದಾಗಲೂ ಹಝ್ರತ್ ಮಸೀಹ್ ಮೌಊದ್(ಅ) ಸತ್ಯಕ್ಕೆ ಆದ್ಯತೆ ನೀಡಿದ್ದರು ಮತ್ತು ನಷ್ಟ ಅನುಭವಿಸಬೇಕಾಗಿ ಬಂದಾಗಲೂ ಅವರು ಸತ್ಯವನ್ನು ಕೈಬಿಡಲಿಲ್ಲ. ಅನಂತರ, ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಎದುರಾಳಿಗಳನ್ನು ಶಕ್ತವಾಗಿ ಸಂಬೋಧಿಸುತ್ತಾ ಹೀಗೆ ಹೇಳಿದರು: ನೀವು ಹೇಳುವುದು ಸತ್ಯವಾಗಿದ್ದರೆ ಕೇವಲ ಆರೋಪಗಳನ್ನು ಹೊರಿಸಿ ಸುಮ್ಮನೆ ಇರಬೇಡಿರಿ, ಬದಲಾಗಿ ಖಚಿತ ಮತ್ತು ಸ್ಪಷ್ಟವಾದ ಪುರಾವೆಗಳನ್ನು ಒದಗಿಸಿರಿ. ಏಕೆಂದರೆ ಸತ್ಯವಂತ ಮತ್ತು ದೇವಭಯವುಳ್ಳ ವ್ಯಕ್ತಿಯು ಸರಿಯಾಗಿ ಅನ್ವೇಷಣೆ ನಡೆಸದೇ ಯಾರ ಮೇಲೂ ಕುಫ್ರ್‌ನ ಆರೋಪವನ್ನು ಎಂದಿಗೂ ಹೊರಿಸುವುದಿಲ್ಲ. ಇದು ಆಕ್ಷೇಪಣೆಗೆ ನೀಡಲಾದ ಪ್ರತ್ಯುತ್ತರ ಮಾತ್ರವಾಗಿರಲಿಲ್ಲ, ಬದಲಿಗೆ ನೈತಿಕ ಮತ್ತು ಆಧ್ಯಾತ್ಮಿಕ ಮಾನದಂಡವನ್ನು ಸ್ಥಾಪಿಸುವ ಕಾರ್ಯವಾಗಿತ್ತು, ಇದರಿಂದ ವಿರೋಧಿ ಸ್ವತಃ ಕಟಕಟೆಯಲ್ಲಿ ನಿಲ್ಲುವಂತಾಗುತ್ತಾನೆ.

ಅನಂತರ ಹಝ್ರತ್ ಮಸೀಹ್ ಮೌಊದ್(ಅ) ವಿಷಯವನ್ನು ಮತ್ತೊಂದು ಉನ್ನತ ಮಟ್ಟಕ್ಕೆ ಕೊಂಡೊಯ್ದು ನಿರ್ಣಾಯಕ ಮತ್ತು ಅಸಾಮಾನ್ಯ ಚ್ಯಾಲೇಂಜನ್ನು ಹಾಕಿದರು. ಹಝ್ರತ್ ಪೈಗಂಬರ್(ಸ) ಮತ್ತು ಪವಿತ್ರ ಖುರ್‌ಆನ್ ಸ್ವತಃ ಸತ್ಯದ ಸಂಕೇತವೆಂದು ಘೋಷಿಸಿದ ಮಾನದಂಡದಲ್ಲಿ, ಅಂದರೆ ಆಧ್ಯಾತ್ಮಿಕ ಸತ್ಯದೊಂದಿಗೆ (ನಿಜವಾದ ಕನಸುಗಳು ಮತ್ತು ದಿವ್ಯವಾಣಿಗಳ ಸತ್ಯತೆ) ನಮ್ಮಿಬ್ಬರನ್ನೂ (ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಎದುರಾಳಿಗಳನ್ನು) ಪರೀಕ್ಷಿಸೋಣ ಬನ್ನಿ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಒಂದು ಸಭೆಯನ್ನು ಆಯೋಜಿಸಿ ಎರಡೂ ಕಡೆಯವರು ತಮ್ಮ ಪುರಾವೆಗಳನ್ನು ಮಂಡಿಸಬೇಕು. ಯಾರ ಸತ್ಯವು ಸ್ಪಷ್ಟವಾಗುತ್ತದೆಯೋ, ತಕ್ಷಣವೇ ಇನ್ನೊಬ್ಬನನ್ನು ಸುಳ್ಳುಗಾರ, ದಜ್ಜಾಲ್ ಮತ್ತು ಮೋಸಗಾರ ಎಂದು ಒಪ್ಪಿಕೊಳ್ಳಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಬಹಿರಂಗವಾಗಿ ಘೋಷಿಸಿದರು.

ಇಲ್ಲಿ ಹಝ್ರ಼ತ್ ಮಸೀಹ್ ಮೌಊದ್(ಅ)ರ ಧೈರ್ಯದ ಉತ್ತುಂಗವನ್ನು ನಾವು ಕಾಣುತ್ತೇವೆ. ಈ ಪರೀಕ್ಷೆಯಲ್ಲಿ ನಾನು ಸುಳ್ಳುಗಾರನೆಂದು ಸಾಬೀತಾದರೆ, ನನ್ನ ಮೇಲಿರುವ ಎಲ್ಲ ಆರೋಪಗಳನ್ನು ನಾನೇ ಒಪ್ಪಿಕೊಳ್ಳುತ್ತೇನೆ ಎಂದು ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳಿದರು. ಅದು ಕುಫ್ರ್, ದಜ್ಜಾಲ್ ಅಥವಾ ವಂಚನೆಯ ಆರೋಪವಾದರೂ ಸರಿ. ಆದರೆ ಅಲ್ಲಾಹನು ನನ್ನ ಸತ್ಯವನ್ನು ಬಹಿರಂಗಪಡಿಸಿದರೆ, ಅದೇ ಆರೋಪಗಳನ್ನು ನಿಮ್ಮ ಮೇಲೆ ಒಪ್ಪಿಕೊಳ್ಳುವ ಧೈರ್ಯ ನಿಮಗಿದೆಯೇ? ಎಂದು ಹಝ್ರ಼ತ್ ಮಸೀಹ್ ಮೌಊದ್(ಅ) ಎದುರಾಳಿಗಳೊಡನೆ ಕೇಳಿದರು. ಇವು ಕೇವಲ ಬಾಯಿ ಮಾತಾಗಿರಲಿಲ್ಲ, ಬದಲಿಗೆ ಸತ್ಯದ ಮೇಲಿನ ಸಂಪೂರ್ಣ ನಂಬಿಕೆಯನ್ನು ಪ್ರತಿಬಿಂಬಿಸುವ ಮುಕ್ತ, ನಿಷ್ಪಕ್ಷಪಾತ ಮತ್ತು ಸ್ಪಷ್ಟ ಚ್ಯಾಲೇಂಜ್ ಆಗಿತ್ತು.

ಕೊನೆಗೆ ಹಝ್ರ಼ತ್ ಮಸೀಹ್ ಮೌಊದ್(ಅ) ಬಹಳ ದೃಢತೆ ಮತ್ತು ವೈಭವದೊಂದಿಗೆ ಹೀಗೆ ಘೋಷಿಸಿದರು: ಅಲ್ಲಾಹನು ಸ್ವತಃ ತೀರ್ಮಾನ ಮಾಡುವನು ಮತ್ತು ಪ್ರತಿಯೊಬ್ಬ ಸುಳ್ಳುಗಾರನ ನಿಜಸ್ಥಿತಿ ಬಹಿರಂಗಗೊಳ್ಳುವ ಸಮಯ ಸಮೀಪಿಸಿದೆ. ಬೇರೆಯವರನ್ನು ಅವಮಾನಿಸಲು ಏಳುವವನು ಸ್ವತಃ ಅವಮಾನಿತನಾಗುವನು. ನೀವು ಸತ್ಯದ ಅನ್ವೇಷಕರಾಗಿ ನನ್ನ ಜೀವನ ಚರಿತ್ರೆಯನ್ನು ನೋಡಿದರೆ, ಅಲ್ಲಾಹನು ಯಾವಾಗಲೂ ನನ್ನನ್ನು ಸುಳ್ಳಿನ ಅಶುದ್ಧತೆಯಿಂದ ರಕ್ಷಿಸಿದ್ದಾನೆ ಎಂಬುದು ಸಂಪೂರ್ಣ ಪುರಾವೆಗಳೊಂದಿಗೆ ನಿಮಗೆ ಸ್ಪಷ್ಟವಾಗುವುದು. ಎಷ್ಟರಮಟ್ಟಿಗೆಂದರೆ, ಕೆಲವೊಮ್ಮೆ ಬ್ರಿಟಿಷ್ ನ್ಯಾಯಾಲಯಗಳಲ್ಲಿ ನನಗೆ ಪ್ರಾಣಹಾನಿ ಮತ್ತು ನನ್ನ ಗೌರವಕ್ಕೆ ಧಕ್ಕೆ ಆಗುವ ಸ್ಥಿತಿ ಬಂದಾಗ ಸುಳ್ಳು ಹೇಳಬೇಕೆಂಬ ಸಲಹೆ ಅಲ್ಲದೇ ಬೇರೆ ಯಾವುದೇ ಮಾರ್ಗವನ್ನು ಯಾವ ವಕೀಲ ಕೂಡ ನನಗೆ ಹೇಳಿಕೊಡಲಿಲ್ಲ. ಆದರೆ ಅಲ್ಲಾಹನ ಕೃಪೆಯಿಂದ, ಸತ್ಯಕ್ಕಾಗಿ ನಾನು ನನ್ನ ಪ್ರಾಣ ಮತ್ತು ಗೌರವವನ್ನು ತ್ಯಜಿಸಿದೆ. ಕೆಲವೊಮ್ಮೆ ಆರ್ಥಿಕ ಪ್ರಕರಣಗಳಲ್ಲಿ ನಾನು ಸತ್ಯಕ್ಕಾಗಿ ದೊಡ್ಡ ನಷ್ಟವನ್ನು ಅನುಭವಿಸಿದೆ. ಕೆಲವೊಮ್ಮೆ ದೇವಭಯದಿಂದ ಮಾತ್ರ ನನ್ನ ತಂದೆ ಮತ್ತು ಸಹೋದರನ ವಿರುದ್ಧ ಸಾಕ್ಷ್ಯ ನುಡಿದೆ ಮತ್ತು ಸತ್ಯವನ್ನು ಕೈಬಿಡಲಿಲ್ಲ. ನನ್ನ ಬಾಯಿಂದ ಸುಳ್ಳು ಹೊರಬಂದಿದೆ ಎಂದು ಯಾರಿಗೆ ಸಾಬೀತುಪಡಿಸಲು ಸಾಧ್ಯ?

ಅಲ್ಲಾಹನಿಗಾಗಿ ಮಾತ್ರ ಮನುಷ್ಯರ ಬಗ್ಗೆ ಸುಳ್ಳು ಹೇಳುವುದನ್ನು ನಾನು ಮೊದಲಿನಿಂದಲೂ ತ್ಯಜಿಸಿರುವಾಗ ಹಾಗೂ ನನ್ನ ಪ್ರಾಣ ಮತ್ತು ಸಂಪತ್ತನ್ನು ಸತ್ಯಕ್ಕಾಗಿ ಅನೇಕ ಬಾರಿ ತ್ಯಾಗ ಮಾಡಿರುವಾಗ, ನಾನು ಅಲ್ಲಾಹನ ಮೇಲೆ ಏಕೆ ಸುಳ್ಳು ಹೇಳಬೇಕು?

ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯವಂತರನ್ನು ಪರೀಕ್ಷಿಸಲಾಗುವ ಮತ್ತೊಂದು ಮಾರ್ಗ ಸಹ ಇದೆ. ಅದೇನೆಂದರೆ, ಕೆಲವೊಮ್ಮೆ ಸುಳ್ಳಿನ ಹೊರತಾಗಿ ಬಿಡುಗಡೆಯ ಬೇರೆ ಯಾವುದೇ ಮಾರ್ಗ ಬಾಹ್ಯವಾಗಿ ಕಾಣದಂತಹ ವಿಪತ್ತಿಗೆ ಮನುಷ್ಯನು ಸಿಲುಕುತ್ತಾನೆ. ಆಗ ಅವನ ಸ್ವಭಾವದಲ್ಲಿ ಸತ್ಯವಿದೆಯೇ ಎಂದು ಪರೀಕ್ಷಿಸಲಾಗುತ್ತದೆ.

ಈ ನಿಟ್ಟಿನಲ್ಲಿ ಹಝ್ರ಼ತ್ ಮಸೀಹ್ ಮೌಊದ್(ಅ) ತಮ್ಮ ಜೀವನದಿಂದ ಮೂರು ಉದಾಹರಣೆಗಳನ್ನು ಪ್ರಸ್ತುತಪಡಿಸಿದರು. ಮೊದಲನೆಯದು ಮಿರ್ಝ಼ಾ ಆಝಮ್ ಬೇಗ್ ಸಾಹಿಬ್ ಲಾಹೋರಿಯವರ ಪ್ರಯತ್ನದಿಂದ ದಾಖಲಾದ ಆಸ್ತಿ ಪ್ರವೇಶ ಪ್ರಕರಣ. ಎರಡನೆಯದು ಅಂಚೆ ಕಚೇರಿ ಪ್ರಕರಣ. ಮೂರನೆಯ ಘಟನೆಯು ಹಿಂದೂವೊಬ್ಬನ ವಿರುದ್ಧ ಹಝ್ರ಼ತ್ ಮಸೀಹ್ ಮೌಊದ್(ಅ)ರ ಪುತ್ರ ಹಝ್ರ಼ತ್ ಮಿರ್ಝ಼ಾ ಸುಲ್ತಾನ್ ಅಹ್ಮದ್ ಸಾಹಿಬ್ ಹೂಡಿದ ಮೊಕದ್ದಮೆಯಾಗಿತ್ತು. ಹಝ್ರ಼ತ್ ಮಸೀಹ್ ಮೌಊದ್(ಅ) ಮತ್ತು ಅವರ ಕುಟುಂಬದ ಜಮೀನಿನಲ್ಲಿ ಆ ಹಿಂದೂವು ಮನೆ ಕಟ್ಟಿದ್ದಾನೆ ಎಂದು ಸುಲ್ತಾನ್ ಅಹ್ಮದ್ ಸಾಹಿಬ್ ಪ್ರಕರಣ ದಾಖಲಿಸಿದ್ದರು ಮತ್ತು ಅದನ್ನು ಕೆಡವಿ ಹಾಕಬೇಕೆಂದು ವಾದಿಸಲಾಗಿತ್ತು. ಆದರೆ ಪ್ರಕರಣದಲ್ಲಿ ಒಂದು ವಿಷಯವು ಸತ್ಯಕ್ಕೆ ವಿರುದ್ಧವಾಗಿತ್ತು. ಆದ್ದರಿಂದ, ವಿರೋಧಿಗಳು ಹಝ್ರ಼ತ್ ಮಸೀಹ್ ಮೌಊದ್(ಅ)ರ ಹೆಸರನ್ನು ಸಾಕ್ಷಿಗಳ ಪಟ್ಟಿಯಲ್ಲಿ ಸೇರಿಸಿದರು ಮತ್ತು ಹಝ್ರ಼ತ್ ಮಸೀಹ್ ಮೌಊದ್(ಅ) ನೀಡುವ ಸಾಕ್ಷ್ಯವನ್ನು ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದರು. ಕೇವಲ ಸತ್ಯಕ್ಕಾಗಿ ಹಝ್ರ಼ತ್ ಮಸೀಹ್ ಮೌಊದ್(ಅ) ಆ ಪ್ರಕರಣವನ್ನು ತನ್ನ ಸ್ವಂತ ಕೈಯಿಂದ ಹಾಳುಮಾಡಿದರು ಮತ್ತು ಸತ್ಯವನ್ನು ಮುಂದಿಟ್ಟುಕೊಂಡು ಆರ್ಥಿಕ ನಷ್ಟವನ್ನು ಆರಿಸಿಕೊಂಡರು.

ಮುಹಮ್ಮದ್ ಹುಸೈನ್ ಬಟಾಲವಿ ಸಾಹಿಬರನ್ನು ಸಂಬೋಧಿಸುತ್ತಾ ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲೈ ಹಝ್ರ಼ತ್ ಶೇಖ್ ಸಾಹಿಬ್!, ನಿಮ್ಮ ಬಳಿಯೂ ಇಂತಹ ಪರೀಕ್ಷೆಯ ಯಾವುದಾದರೂ ಉದಾಹರಣೆ ಇದ್ದರೆ, ಸತ್ಯವನ್ನು ಹೇಳುವುದರಿಂದ ನಿಮ್ಮ ಜೀವ, ಗೌರವ ಮತ್ತು ಸಂಪತ್ತು ನಾಶವಾಗುವುದಾಗಿ ನೀವು ಕಂಡಾಗಲೂ ನೀವು ಸತ್ಯವನ್ನು ಬಿಡದಿದ್ದರೆ ಹಾಗೂ ಸಂಪತ್ತು ಮತ್ತು ಜೀವದ ಬಗ್ಗೆ ಚಿಂತಿಸಲಿಲ್ಲ ಎಂದಾದರೆ, ಅಂತಹ ಘಟನೆಯನ್ನು ಅದರ ಸಂಪೂರ್ಣ ಪುರಾವೆಯೊಂದಿಗೆ ಅಲ್ಲಾಹನಿಗಾಗಿ ಪ್ರಸ್ತುತಪಡಿಸಿರಿ. ಸತ್ಯದಲ್ಲಿ ಈ ಕಾಲದ ಹೆಚ್ಚಿನ ಮುಲ್ಲಾಗಳು ಮತ್ತು ಮೌಲ್ವಿಗಳದ್ದು ಬಾಯಿಮಾತು ಮಾತ್ರವಾಗಿದೆ ಹಾಗೂ ಹಣಕ್ಕಾಗಿ ಅವರು ತಮ್ಮ ಈಮಾನನ್ನು ಮಾರಾಟ ಮಾಡಲು ಸಿದ್ಧರಾಗಿದ್ದಾರೆ ಎಂದು ನಾನು ನಂಬುತ್ತೇನೆ. ಏಕೆಂದರೆ ಕೊನೆಗಾಲದ ಮೌಲ್ವಿಗಳು ಅತ್ಯಂತ ಕೆಟ್ಟ ಜೀವಿಗಳು ಆಗಿರುತ್ತಾರೆ ಎಂದು ಹಝ್ರ಼ತ್ ಪೈಗಂಬರ್(ಸ) ಹೇಳಿದ್ದಾರೆ. ಆ ಕೊನೆಗಾಲ ಇದೇ ಆಗಿದೆ ಎಂದು ನಿಮ್ಮ ಮುಜದ್ದಿದ್ ಆದ ನವಾಬ್

ಸಿದ್ದೀಕ್ ಹಸನ್ ಖಾನ್ ಸಾಹಿಬ್‌ರು ಹಿಜಜುಲ್ ಕರಾಮದಲ್ಲಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಅಂತಹ ಮೌಲ್ವಿಗಳ ಧರ್ಮನಿಷ್ಠೆ ಮತ್ತು ಭಯಭಕ್ತಿಯನ್ನು ಪುರಾವೆಯಿಲ್ಲದೆ ಒಪ್ಪಿಕೊಳ್ಳುವುದರಿಂದ ಹಝ್ರತ್ ಪೈಗಂಬರ್[ಸ]ರ ಮಾತುಗಳನ್ನು ನಿರಾಕರಿಸಿದಂತಾಗುವುದು. ಆದ್ದರಿಂದ ನೀವು ಉದಾಹರಣೆಯನ್ನು ಪ್ರಸ್ತುತಪಡಿಸಿರಿ. ನಿಮಗೆ ಪ್ರಸ್ತುತಪಡಿಸಲು ಸಾಧ್ಯವಾಗದಿದ್ದರೆ, ನಿಮ್ಮ ಬಳಿ ಸತ್ಯದ ಪೊಳ್ಳುವಾದ ಮಾತ್ರ ಇರುವುದು ಎಂದು ಸಾಬೀತಾಗುತ್ತದೆ. ಆದರೆ ಪರೀಕ್ಷೆಯಿಲ್ಲದೆ ಯಾವುದೇ ವಾದವನ್ನು ಅಂಗೀಕರಿಸಲು ಸಾಧ್ಯವಲ್ಲ. ನೀವು ಎಂದಾದರೂ ಸುಳ್ಳಿನ ಮಲಿನತೆಗೆ ಒಳಗಾಗಿದ್ದೀರಾ ಇಲ್ಲವೇ ಎಂಬ ನಿಮ್ಮ ಆಂತರಿಕ ಸ್ಥಿತಿ ಅಲ್ಲಾಹನಿಗೆ ತಿಳಿದಿದೆ. ಅದು ನನಗೆ ಗೊತ್ತಿಲ್ಲ. ಏಕೆಂದರೆ ಅದೃಶ್ಯವಾದ ಅರಿವು ಅಲ್ಲಾಹನಿಗೆ ಮಾತ್ರ ತಿಳಿದಿದೆ ಅಥವಾ ನಿಮ್ಮ ಪರಿಸ್ಥಿತಿಯ ಅರಿವಿರುವವರಿಗೆ ಅದು ಗೊತ್ತಿರಬಹುದು. ಪರೀಕ್ಷೆಯ ಸಮಯದಲ್ಲಿ ಸತ್ಯವಂತನಾಗಿ ಹೊರಹೊಮ್ಮುವ ಮತ್ತು ಸತ್ಯವನ್ನು ಬಿಡದ ವ್ಯಕ್ತಿಯ ಸತ್ಯದ ಮೇಲೆ ಮುದ್ರೆ ಒತ್ತಲ್ಪಡುತ್ತದೆ. ಅಂತಹ ಪುರಾವೆ ನಿಮ್ಮ ಬಳಿ ಇದ್ದರೆ, ಅದನ್ನು ಪ್ರಸ್ತುತಪಡಿಸಿರಿ, ಇಲ್ಲದಿದ್ದರೆ ಅಲ್ಲಾಹನಿಗೆ ಭಯಪಡಿರಿ, ಅವನು ನಿಮ್ಮ ರಹಸ್ಯವನ್ನು ಬಯಲು ಮಾಡುವಂತಾಗದಿರಲಿ.

(ಹುಝೂರ್ ಹೇಳಿದರು:) ಎದುರಾಳಿ ಕಡೆಯವರು ಹಝ್ರತ್ ಮಸೀಹ್ ಮೌಊದ್[ಅ]ರ ಸಾಕ್ಷ್ಯವನ್ನು ಕೇಳಿದ್ದಾರೆ ಎಂದು ಹಝ್ರತ್ ಸಾಹಿಬ್‌ಝಾದ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್‌ರಿಗೆ ಗೊತ್ತಾದಾಗ, ಹಝ್ರತ್ ಮಸೀಹ್ ಮೌಊದ್[ಅ] ಎಂದಿಗೂ ಸುಳ್ಳು ಹೇಳಲಾರರು ಎಂದು ಅವರಿಗೆ ತಿಳಿದಿದ್ದರಿಂದ, ಅವರು ಮೊಕದ್ದಮೆ ವಾಪಾಸು ಪಡೆದರು.

ಆ ಮನೆಯನ್ನು ಡೆಪ್ಯುಟಿ ಶಂಕರ್‌ದಾಸ್‌ನ ಹವೇಲಿ ಎಂದು ಕರೆಯಲಾಗುತ್ತಿತ್ತು, ಆತ ಹಗೆ ಹೊಂದಿದವನೂ ವಿರೋಧಿಯೂ ಆಗಿದ್ದನು. ಆ ಮನೆಯಿಂದ ಹಝ್ರತ್ ಮಸೀಹ್ ಮೌಊದ್[ಅ]ರ ಮನೆಯ ಒಳಗಿನ ಭಾಗವನ್ನು ಕಾಣಬಹುದಾಗಿತ್ತು. ಅದಲ್ಲದೇ ಆ ವ್ಯಕ್ತಿ ನಮಾಝಿಗೆ ಹೋಗುವವರನ್ನು ಬೈಯ್ಯುತ್ತಿದ್ದನು. ನಮಾಝಿಗೆ ಬರುವವರು ಆತನ ವರ್ತನೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ದೂರು ಹೇಳಿದಾಗ, ಅವರು ಹೀಗೆ ಹೇಳುತ್ತಿದ್ದರು: ತಾಳ್ಮೆಯಿಂದಿರಿ, ರಾಜಮನೆತನದ ಶಿಬಿರದ ಮುಂದೆ ಯಾರಿಗೂ ಇರಲು ಸಾಧ್ಯವಿಲ್ಲ. ಹಾಗೆ, ನೋಡನೋಡುತ್ತಿದ್ದಂತೆ, ಡೆಪ್ಯುಟಿಯ ಸುಂದರವಾದ ಆ ಮನೆ ಕುಸಿಯಲಾರಂಭಿಸಿತು ಮತ್ತು ಆತನು ಸ್ವತಃ ಅನಾರೋಗ್ಯಕ್ಕೆ ಒಳಗಾದನು ಮತ್ತು ಹೇಗೋ ಅಲ್ಲಿಂದ ಹೊರಟುಹೋದನು.

ನಂತರ ಈ ಮನೆಯನ್ನು ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್[ರ] ಖರೀದಿ ಮಾಡಿದರು. 1932ರಲ್ಲಿ, ಈ ಮನೆಯಲ್ಲಿ ಸದರ್ ಅಂಜುಮನ್ ಅಹ್ಮದಿಯಾದ ಕಚೇರಿಗಳನ್ನು ಸ್ಥಾಪಿಸಲಾಯಿತು ಮತ್ತು ಹಝ್ರತ್ ಮುಸ್ಲಿಹ್ ಮೌಊದ್[ರ] ಅದರ ಉದ್ಘಾಟನೆಯನ್ನು ಮಾಡಿದರು. ಬಹಳ ಅಹಂಕಾರದಿಂದ ಮಸೀದಿಗೆ ಹೋಗುವವರನ್ನು ತಡೆಯುತ್ತಿದ್ದ ಆ ವ್ಯಕ್ತಿಯ ಮನೆ ಮತ್ತು ಆ ಇಡೀ ಪ್ರದೇಶ ಅಲ್ಲಾಹನ ವಿಧಿಯಂತೆ ಮಸೀದಿಯಾಯಿತು. ಈ ಮನೆ ಈಗ ಮಸ್ಜಿದ್ ಅಖ್ಸಾದ ಭಾಗವಾಗಿದೆ.

ಈ ವಿವಿಧ ಮೊಕದ್ದಮೆಗಳ ಬಗ್ಗೆ ಪ್ರಸ್ತಾಪಿಸುತ್ತಾ, ಹಝ್ರತ್ ಶೇಖ್ ನೂರ್ ಅಹ್ಮದ್ ಸಾಹಿಬ್[ರ] ವಿವರಿಸುತ್ತಾರೆ: ನನ್ನ ತಂದೆ ಮತ್ತು ದೊಡ್ಡಪ್ಪ ಹೇಳುತ್ತಿದ್ದರು, ನಮ್ಮ ಊರು ಮಿರ್ಝಾ ಸಾಹಿಬ್‌ರ ತಾಲೂಕಿನಲ್ಲಿತ್ತು, ಸ್ವಲ್ಪ ಸಮಯ ಮಿರ್ಝಾ ಸಾಹಿಬ್‌ರು ತಮ್ಮ ತಂದೆಯ ಅಧೀನದಲ್ಲಿದ್ದರು ಮತ್ತು ನಮ್ಮೊಂದಿಗೂ ಕೆಲವು ಮೊಕದ್ದಮೆಗಳಿಗಾಗಿ ಅವರಿಗೆ ಹೋಗಬೇಕಾಗಿ ಬಂದಿತ್ತು. ಮೊಕದ್ದಮೆಯಲ್ಲಿ ಎಷ್ಟೇ ಹಾನಿಯಾದರೂ ಹಝ್ರತ್ ಮಸೀಹ್ ಮೌಊದ್[ಅ] ಯಾವಾಗಲೂ ಸತ್ಯದ ಮಾರ್ಗವನ್ನೇ ಆರಿಸಿಕೊಳ್ಳುತ್ತಿದ್ದರು.

ಹಝ್ರತ್ ಮಿಯಾ ಅಲ್ಲಾಯಾರ್ ಸಾಹಿಬ್[ರ] ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಇಪ್ಪತ್ತೈದು ಮೂವತ್ತು ವರ್ಷ ಪ್ರಾಯವಿದ್ದಾಗ, ಮರ ಕಡಿಯುವ ವಿಚಾರದಲ್ಲಿ ಅವರ ತಂದೆಗೆ ತಮ್ಮ ಗೇಣಿದಾರರೊಂದಿಗೆ ವಿವಾದ ಉಂಟಾಯಿತು. ಭೂಸ್ವತ್ತು ನಮ್ಮದಾಗಿರುವುದರಿಂದ ಅದರಲ್ಲಿರುವ ಮರಗಳು ಕೂಡ ನಮ್ಮದೇ ಎಂಬುದು ಅವರ ತಂದೆಯ ಅಭಿಪ್ರಾಯವಾಗಿತ್ತು. ಕೇಸಿಗಾಗಿ ಹಝ್ರತ್ ಮಸೀಹ್ ಮೌಊದ್[ಅ] ಗುರುದಾಸ್‌ಪುರಕ್ಕೆ ಹೋದರು. ಹಝ್ರತ್ ಮಸೀಹ್ ಮೌಊದ್[ಅ]ರ ಜೊತೆಗೆ ಇಬ್ಬರು ಸಾಕ್ಷಿಗಳು ಸಹ ಇದ್ದರು. ಹಝ್ರತ್ ಮಸೀಹ್ ಮೌಊದ್[ಅ] ಸಾಕ್ಷಿಗಳೊಡನೆ ಹೀಗೆ ಹೇಳಿದರು: ತಂದೆಯವರು ಸುಮ್ಮನೆ ಒತ್ತಾಯಪಡಿಸುತ್ತಿದ್ದಾರೆ, ಮರಗಳು ಕೂಡ ಕೃಷಿಯಂತೆಯೇ ಆಗಿವೆ. ಅವರು ಬಡವರು, ಅವರು ಅದನ್ನು ಕಡಿದರೆ ಕೂಡ ಚಿಂತಿಸಬೇಕಾಗಿಲ್ಲ. ಇದು ಸಂಪೂರ್ಣವಾಗಿ ನಮ್ಮದೇ ಎಂದು ನಾನು ನ್ಯಾಯಾಲಯದಲ್ಲಿ ಹೇಳಲಾರೆ, ಹೌದು! ನಮ್ಮ ಪಾಲೂ ಇರಬಹುದು ಎಂದು ಹೇಳಿದರು. ಗೇಣಿದಾರರಿಗೂ ಹಝ್ರತ್ ಮಸೀಹ್ ಮೌಊದ್[ಅ]ರ ಮೇಲೆ ಅಪಾರ ಭರವಸೆ ಇತ್ತು. ಅವರೊಡನೆ ಮ್ಯಾಜಿಸ್ಟ್ರೇಟ್ ವಿಚಾರಿಸಿದಾಗ, ಅವರು ಯಾವುದೇ ಹಿಂಜರಿಕೆಯಿಲ್ಲದೆ, ಮಿರ್ಝಾ ಸಾಹಿಬ್‌ರೊಡನೆ ಕೇಳಿರಿ ಎಂದು ಉತ್ತರಿಸಿದರು. ವಿಚಾರಿಸಲಾದಾಗ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳಿದರು: ನನ್ನ ಪ್ರಕಾರ ಮರಗಳು ಕೃಷಿಯಂತೆ ಆಗಿವೆ.

ಕೃಷಿಯಲ್ಲಿ ನಮ್ಮ ಪಾಲು ಇರುವಂತೆಯೇ, ಮರಗಳಲ್ಲಿಯೂ ನಮ್ಮ ಪಾಲು ಇದೆ. ಹೀಗೆ ಹಝ್ರತ್ ಮಸೀಹ್ ಮೌಊದ್(ಅ)ರ ಈ ಹೇಳಿಕೆಯ ಪ್ರಕಾರ, ಮ್ಯಾಜಿಸ್ಟ್ರೇಟ್ ಗೇಣಿದಾರರ ಪರವಾಗಿ ತೀರ್ಪು ನೀಡಿದರು.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಿಂದ ಸತ್ಯಸಂಧತೆಯ ಕೆಲವು ಘಟನೆಗಳನ್ನು ನಾನು ಪ್ರಸ್ತಾಪಿಸಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಯಾವಾಗಲೂ ಸತ್ಯಕ್ಕೆ ಆದ್ಯತೆ ನೀಡಿದ್ದರು ಮತ್ತು ಸುಳ್ಳಿನ ಹತ್ತಿರಕ್ಕೂ ಹೋಗಲಿಲ್ಲ. ಯಾವಾಗಲೂ ಸತ್ಯದ ಮೇಲೆ ನೆಲೆನಿಲ್ಲಲು ಹಝ್ರತ್ ಮಸೀಹ್ ಮೌಊದ್(ಅ) ತನ್ನ ಅನುಯಾಯಿಗಳನ್ನೂ ಉಪದೇಶಿಸಿದರು. ಬೈಅತ್ತಿನ ಶರತ್ತುಗಳಲ್ಲಿಯೂ ನಾವು ಸುಳ್ಳನ್ನು ದ್ವೇಷಿಸುತ್ತೇವೆ ಮತ್ತು ಸತ್ಯದಲ್ಲಿ ನೆಲೆನಿಲ್ಲುತ್ತೇವೆ ಎಂದು ಬರೆಯಲಾಗಿದೆ. ಆದ್ದರಿಂದ, ಸತ್ಯವನ್ನು ನಮ್ಮ ವಿಶೇಷ ಗುಣವನ್ನಾಗಿ ಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ದಯಪಾಲಿಸಲಿ.

——————————*****——————————

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ط وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ؕ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 01-05-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon